ಪುರಾತತ್ವ ಇಲಾಖೆ ಕಾಮಗಾರಿಗಳು

3126 (3574); ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ)

ಅ) ಹೊಸಪೇಟೆ ತಾಲ್ಲೂಕಿನ ವಿಜಯನಗರ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವಂತಹ ವಿಶ್ವ ವಿಖ್ಯಾತ ಪ್ರವಾಸಿ ಸ್ಥಳವಾದ ಹಂಪಿಯಲ್ಲಿ ರಾಜ್ಯ ಪುರಾತತ್ವ ಇಲಾಖೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವತಿಯಿಂದ ಮಂಜೂರಾದ ಕಾಮಗಾರಿಗಳು ಯಾವುವು (ಬಿಡುಗಡೆಯಾದ ಮೊತ್ತ ಹಾಗೂ ವೆಚ್ಚವಾಗಿರುವ ಮೊತ್ತಗಳ ವಿವರ ನೀಡುವುದು);

ಆ) ಸದರಿ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಲು ಪ್ರಾರಂಭಿಸಲಾಗಿದೆಯೆ; ಹಾಗಿದ್ದಲ್ಲಿ, ಯಾವಾಗ?

ಶ್ರೀಮತಿ ಉಮಾಶ್ರೀ (ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು)

ಅ) ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಹಂಪಿ, ಕಮಲಾಪುರ ವ್ಯಾಪ್ತಿಯಲ್ಲಿನ ಪ್ರದೇಶದಲ್ಲಿ ಇಲಾಖೆಯ ವತಿಯಿಂದ ಕೈಗೊಂಡಿರುವ ಸಂರಕ್ಷಣಾ ಕಾಮಗಾರಿಗಳ ವಿವರ, ಬಿಡುಗಡೆಯಾದ ಮೊತ್ತ ಮತ್ತು ವೆಚ್ಚಗಳ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಹಂಪಿಯಲ್ಲಿರುವ ಹಿರೇಭತ್ರ ಸ್ಮಾರಕದ ಸಂರಕ್ಷಣಾ ಕಾಮಗಾರಿಯು ಭೂ ತಕರಾರಿನಿಂದಾಗಿ ಸ್ಥಗಿತಗೊಂಡಿದ್ದು, ಈ ಒಂದು ಕಾಮಗಾರಿಯನ್ನು ಹೊರತುಪಡಿಸಿ ಇನ್ನುಳಿದ ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಅನುಬಂಧ

2011-12 ರಿಂದ 2014-15ನೇ ಸಾಲಿನವರೆಗೆ 13ನೇ ಹಣಕಾಸು ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಯ ವಿವರಗಳು

ಯೋಜನೆಯ ಹೆಸರು: ಪರಂಪರ ಸಂರಕ್ಷಣೆ/ಸ್ಮಾರಕಗಳ ಸಂರಕ್ಷಣೆ

ಯೋಜನೆ ಕೈಗೊಂಡ ಇಲಾಖೆ: ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಕ್ರ ಸಂ	ಸಂರಕ್ಷಣಾ ಸ್ಮಾರಕಗಳ ಕಾಮಗಾರಿಯ ಹೆಸರು	ತಾಂತ್ರಿಕ ಅನುಮೋದಿತ ಅಂದಾಜು ಮೊತ್ತ	ಗುತ್ತಿಗೆ ನಮೂದಿತ ಮೊತ್ತ	ಜೂನ್ 2015ರ ಅಂತ್ಯಕ್ಕೆ ವೆಚ್ಚ	ಷರಾ
	ಗುಲ್ಬರ್ಗಾ ವಿಭಾಗ				
	ಬಳ್ಳಾರಿ ಜಿಲ್ಲೆ				
1	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಕಮಲಾಪುರದಲ್ಲಿರುವ ಕೋದಂಡರಾಮ ದೇಗುಲ ಸಂರಕ್ಷಣಾ ಕೆಲಸ.	75.00	85.26	79.35	ಕಾಮಗಾರಿಯು ಮುಕ್ತಾಯಗೊಂಡಿದೆ ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ.
2	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಹಂಪಿಯಲ್ಲಿರುವ ಶ್ರೀ ಪಂಚಮುಖಿ ವೀರಭದ್ರೇಶ್ವರ ದೇವಾಲಯದ ಸಂರಕ್ಷಣಾ ಕೆಲಸ.	50.00	57.30	50.92	ಕಾಮಗಾರಿಯು ಮುಕ್ತಾಯಗೊಂಡಿದೆ. ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ
3	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಕಮಲಾಪುರದಲ್ಲಿರುವ ಕೋದಂಡರಾಮ ದೇಗುಲದ (ಗಾಣಿಸ್ನಾನ ಗೃಹದ ಹತ್ತಿರ) ಸಂರಕ್ಷಣಾ ಕೆಲಸ.	95.00	102.24	101.40	ಕಾಮಗಾರಿಯು ಮುಕ್ತಾಯಗೊಂಡಿದೆ. ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ
4	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಕಮಲಾಪುರದಲ್ಲಿರುವ ಜೈನ ದೇವಾಲಯದ ಹತ್ತಿರವಿರುವ ಶೃಂಗಾರಬಾವಿಯ ಸಂರಕ್ಷಣಾ ಕೆಲಸ.	65.00	73.25	32.43	ಕಾಮಗಾರಿಯು ಮುಕ್ತಾಯಗೊಂಡಿದೆ. ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ.
5	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಹಂಪಿಯಲ್ಲಿರುವ ಹರೀಭದ್ರದ ಸಂರಕ್ಷಣಾ ಕೆಲಸ	215.00	246.51	18.53	ಭೂಮಾಲೀಕರ ತಕರಾರಿನಿಂದಾಗಿ ಕಾಮಗಾರಿಯನ್ನು ತಡೆಹಿಡಿಯಲಾಗಿದೆ.
6	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಕಮಲಾಪುರದಲ್ಲಿರುವ ಅಕ್ಕಮ್ಮನಗುಡಿ (ವೈಷ್ಣವ) ದೇವಾಲಯದ ಸಂರಕ್ಷಣಾ ಕೆಲಸ.	158.00	171.64	164.07	ಕಾಮಗಾರಿಯು ಮುಕ್ತಾಯಗೊಂಡಿದೆ. ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ.

ಕ್ರ. ನಂ	ಸಂರಕ್ಷಣಾ ಸ್ಮಾರಕಗಳ ಕಾಮಗಾರಿಯ ಹೆಸರು	ತಾಂತ್ರಿಕ ಅನುಮೋದಿತ ಅಂದಾಜು ಮೊತ್ತ	ಟೆಂಡರ್ ಅನುಮೋದಿತ ಮೊತ್ತ	ಜೂನ್ 2015ರ ಅಂತ್ಯಕ್ಕೆ ವೆಚ್ಚ	ಷರಾ
7	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಮಲ್ಲಿಪ್ಪನಗುಡಿಯಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಾಲಯದ ಸಂರಕ್ಷಣಾ ಕೆಲಸ	50.00	52.86	47.01	ಕಾಮಗಾರಿಯು ಮುಕ್ತಾಯಗೊಂಡಿದೆ. ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ
8	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಹಂಪಿಯಲ್ಲಿರುವ ಜೈನ ದೇವಾಲಯದ ಹತ್ತಿರುವ ಶ್ರೀ ಆದಿವಂಕಟೇಶ್ವರ ದೇವಾಲಯದ ಸಂರಕ್ಷಣಾ ಕೆಲಸ.	50.00	57.20	48.15	ಕಾಮಗಾರಿಯು ಮುಕ್ತಾಯಗೊಂಡಿದೆ. ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ
9	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಕಮಲಾಪುರದಲ್ಲಿರುವ ಉದಯಗಿರಿ ಸಂರಕ್ಷಣಾ ಕೆಲಸ.	80.00	91.62	80.92	ಕಾಮಗಾರಿಯು ಮುಕ್ತಾಯಗೊಂಡಿದೆ. ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ
10	ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಹಂಪಿಯಲ್ಲಿರುವ ಶ್ರೀ ಮರಂದರ ಮಂಟಪದ ಸಂರಕ್ಷಣಾ ಕೆಲಸ.	50.00	56.98	55.25	ಕಾಮಗಾರಿಯು ಮುಕ್ತಾಯಗೊಂಡಿದೆ. ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ.
	ಒಟ್ಟು ರೂ.	888.00	894.86	678.03	

ಆಯುಕ್ತರು,
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು